SINDHI HIGH SCHOOL, BENGALURU

Annual Examination -(2022-23)

Subject : L2-Kannada

Class: VI

Date: 27.3.2023

No of sides printed: 11

Max.Marks:80

Reading Time:8.00am to 8.15am

Writing Time:8.15am to10.45am

**ಸೂಚನೆಗಳು:**

*ಪತ್ರಿಕೆಯು ಎ ಮತ್ತು ಬಿ ಎಂಬ ಎರಡು ಭಾಗಗಳನ್ನು ಒಳಗೊಂಡಿರುತ್ತದೆ.

*ಪ್ರಶ್ನೆಪತ್ರಿಕೆಯಲ್ಲಿ ಒಟ್ಟು ೧೨ ಮುಖ್ಯ ಪ್ರಶ್ನೆಗಳು ಇರುತ್ತವೆ.

*ಪ್ರತಿಯೊಂದು ಪ್ರಶ್ನೆಗಳ ಸೂಚನೆಗಳನ್ನು ಸರಿಯಾಗಿ ಓದಿಕೊಂಡು ಉತ್ತರಿಸಿ.

*ಪ್ರಶ್ನೆ ಮತ್ತು ಉಪಪ್ರಶ್ನೆಗಳ ಸಂಖ್ಯೆಯನ್ನು ತಪ್ಪಿಲ್ಲದೆ ಬರೆಯಿರಿ.

| | | |
|---|---|---|
| ಭಾಗ-ಎ<br>(40)ಅಂಕಗಳು | (ವಾಚನ ಮತ್ತು ಗ್ರಹಿಕಾ ಕೌಶಲ್ಯ) | (10) |
| | ಅನ್ವಯಿಕ ವ್ಯಾಕರಣ | (16) |
| | ಬಹು ಆಯ್ಕೆ ಪ್ರಶ್ನೆ-ಪದ್ಯಗಳ ಅಧ್ಯಯನ | (14) |
| ಭಾಗ-ಬಿ<br>(40) ಅಂಕಗಳು | ಬರವಣಿಗೆ ಕೌಶಲ್ಯ | (12) |
| | ಪದ್ಯಗಳ ಅಧ್ಯಯನ | (28) |
| | ಒಟ್ಟು ಅಂಕಗಳು | (80) |

## ಭಾಗ- ಎ

## ವಾಚನ ಮತ್ತು ಗ್ರಹಿಕಾ ಕೌಶಲ್ಯ-೧೦ ಅಂಕಗಳು

**I. (ಅ) ಕೆಳಗಿನ ಗದ್ಯಭಾಗವನ್ನು ಓದಿ,ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **1x5=5**

ಹೆಜ್ಜೆ ಹೆಜ್ಜೆಗೂ ಗುಡಿಗೋಪುರಗಳು, ಬಿಳಿಯ ಮತ್ತು ಕಾವಿ ಬಣ್ಣದ ಧ್ವಜಗಳು, ಹಾರಾಡುವ ಆಶ್ರಮಗಳು, ಸಾಧು ಸಂತರು,ಎಲ್ಲೆಲ್ಲಿಯು ಯಾತ್ರಾರ್ಥಿಗಳು ಇದು ಹರಿದ್ವಾರದ ವರ್ಣನೆ. ಒಂದೆಡೆ ದೀರ್ಘವಾಗಿ ಹಬ್ಬಿಕೊಂಡಿರುವ ಬೂದುಬಣ್ಣದ ಶಿವಾಲಿಕ ಬೆಟ್ಟಗಳು, ಇನ್ನೊಂದೆಡೆ ವೇಗವಾಗಿ ಹರಿಯುವ ಗಂಗಾನದಿ ಈ ಎರಡರ ನಡುವೆ ಉದ್ದಕ್ಕೂ ಚಾಚಿಕೊಂಡಿದೆ. ಹಿಮಾಲಯಕ್ಕೆ ಪ್ರವಾಸ ಹೋಗುವವರಿಗೆ ಮೇ ಅಥವಾ ಸೆಪ್ಟೆಂಬರ್ ತಿಂಗಳುಗಳು ಸರಿಯಾದ ಕಾಲವಾಗಿದೆ.ಕೇದಾರಕ್ಕೆ ಹೊರಡುವ ಶಿವನ ಯಾತ್ರಿಕರು ಹಾಗೂ ಬದರೀಗೆ ಹೊರಡುವ ವಿಷ್ಣು ಭಕ್ತರು ಮೊದಲು ಬರಬೇಕಾದದ್ದು ಹರಿದ್ವಾರಕ್ಕೆ ಆದ್ದರಿಂದ ಇದನ್ನು ಹರಿದ್ವಾರ ಎಂತಲೂ ಹರಿದ್ವಾರ ಎಂತಲೂ ಕರೆಯುವರು. ಇದು ಸಮುದ್ರಮಟ್ಟದಿಂದ ೯೪೫ ಅಡಿಗಳ ಎತ್ತರದಲ್ಲಿದೆ.

ಅಯೋಧ್ಯೆ, ಮಥುರಾ, ಕಾಶೀ, ಮಾಯಾಪುರಿ, ಕಾಂಚೀ, ಆವಂತೀ, ದ್ವಾರಾವತಿ ಇವೆಲ್ಲವೂ ಪುರಾಣೋಕ್ತ ಪ್ರಾಚೀನ ನಗರಗಳಾಗಿವೆ. ಇದರಲ್ಲಿನ ಮಾಯಾಪುರಿ ನಗರವೇ ಇಂದಿನ ಹರಿದ್ವಾರ. ಇದಕ್ಕೆ ಕಪಿಲಸ್ಥಾನ ಎಂಬ ಹೆಸರೂ ಸಹ ಇದೆ. ಸಗರಪುತ್ರರನ್ನು ಕಪಿಲಮಹರ್ಷಿಯು ತನ್ನ ಕೋಪಾಗ್ನಿಯಿಂದ ಬೂದಿ ಮಾಡಿದ ನಂತರ ಅದೇ ವಂಶದ ಭಗೀರಥನು ತನ್ನ ಪಿತೃಗಳಿಗೆ ಸದ್ಗತಿಯನ್ನು ಕಾಣಿಸಲು ಗಂಗೆಯನ್ನು ತಂದು ಹರಿಸಿದ ಸ್ಥಳವಾಗಿದೆ. ಅದಕ್ಕಾಗಿಯೇ ಇದು ಕಪಿಲಸ್ಥಾನ ಎಂದು ಪ್ರತೀತಿ ಪಡೆದಿದೆ. ಹೀಗೆ ನಮ್ಮ ಭಾರತದಲ್ಲಿ ನದಿ, ಮರ, ಗಿಡ, ಪ್ರಾಣಿ-ಪಕ್ಷಿಗಳಿಗೆ ಬಹಳ ಮಹತ್ವವನ್ನು ನೀಡಿದ್ದೇವೆ ಇವೆಲ್ಲವನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

**ಪ್ರಶ್ನೆಗಳು:**

೧. ಹರಿದ್ವಾರವು ಸಮುದ್ರಮಟ್ಟದಿಂದ ಇರುವ ಎತ್ತರ ________

ಅ) ೬೪೫ ಆ) ೯೪೫ ೩) ೮೪೫ ೪) ೪೪೫

೨. ಹರಿದ್ವಾರವು ಬೂದುಬಣ್ಣದ ____________ಬೆಟ್ಟ ಮತ್ತು ಗಂಗಾ ನದಿಯ ನಡುವೆ ಚಾಚಿಕೊಂಡಿದೆ.

ಅ) ಸಹ್ಯಾದ್ರಿ ಆ) ಕೊಡಚಾದ್ರಿ ಇ) ನಂದಿ ಈ) ಶಿವಾಲಿಕ

೩. ಹಿಮಾಲಯಕ್ಕೆ ಹೋಗುವವರಿಗೆ __________ ಸರಿಯಾದ ಕಾಲ.

ಅ) ಮೇ ಅಥವಾ ಸೆಪ್ಟೆಂಬರ್ ಆ) ಜೂನ್ ಅಥವಾ ಜುಲೈ
ಇ) ಆಗಸ್ಟ್ ಅಥವಾ ಅಕ್ಟೋಬರ್ ಈ) ನವೆಂಬರ್ ಅಥವಾ ಡಿಸೆಂಬರ್

೪. ಕಪಿಲ ಮಹರ್ಷಿಯು ________ ಸದ್ಗತಿಯನ್ನು ಕಾಣಿಸಲು ಗಂಗೆಯನ್ನು ಹರಿದ್ವಾರಕ್ಕೆ ತಂದರು.

ಅ) ಮಾತೆಯರಿಗೆ ಆ) ತಂಗಿಯರಿಗೆ ಇ) ಪಿತೃಗಳಿಗೆ ಈ) ತಮ್ಮಂದಿರಿಗೆ

೫. ಮಾಯಾಪುರಿ ,ಅಯೋಧ್ಯ, ಮಥುರಾ, ಕಾಶೀ, ಮಾಯಾಪುರಿ, ಕಾಂಚೀ, ಆವಂತೀ, ದ್ವಾರವತಿ ಇವೆಲ್ಲವೂ ಪುರಾಣೋಕ್ತ ________ ಗಳಾಗಿವೆ.

ಅ) ಪ್ರಾಚೀನ ನಗರ ಆ) ಅವಳಿ ನಗರ ಇ) ಗ್ರಾಮ್ಯನಗರ ಈ) ದೇವನಗರಿ

**(ಆ) ಕೆಳಗಿನ ಗದ್ಯಭಾಗವನ್ನು ಓದಿ,ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 1x5=5**

ಯಾವುದೇ ಒಂದು ಪ್ರದೇಶದ ಅಭಿವೃದ್ಧಿಗೆ ರೂಪಿಸುವ ಕಾರ್ಯಕ್ರಮ ಹೇಗಿರಬೇಕು ಎಂಬ ವಿಷಯವನ್ನು 'ಚಿಪ್ಕೋ ಚಳುವಳಿ' ಜನರಿಗೆ,ಸರ್ಕಾರಕ್ಕೆ ಬಹು ಚೆನ್ನಾಗಿ ಮನದಟ್ಟು ಮಾಡಿಕೊಡುತ್ತದೆ. ಅಭಿವೃದ್ಧಿಯ ಕಾರ್ಯಕ್ರಮಗಳಿಂದ ಪರಿಸರ ಹಾಳಾಗಬಾರದು; ಪರಿಸರಕ್ಕೆ ಪೂರಕವಾಗಿರಬೇಕು. ಪರಿಸರದ ವಿನಾಶವಿಲ್ಲದ ಅಭಿವೃದ್ಧಿಯೇ ನಮ್ಮ ಗುರಿಯಾಗಿರಬೇಕು. ಇದು ಚಿಪ್ಕೋ ಚಳುವಳಿಯ ಮೂಲಮಂತ್ರ. ಸಮಸ್ತ ರೀತಿಯ ಆಧುನಿಕ ಉಪಕರಣಗಳಿಂದ ಸಜ್ಜಾದ ವೃತ್ತಪತ್ರಿಕೆಗಳು, ಸಿನಿಮಾ,ರೇಡಿಯೋ, ದೂರದರ್ಶನ, ಮುಂತಾದ ಮಾಧ್ಯಮಗಳು ಸಾಧಿಸಲಾರದ ಕೆಲಸವನ್ನು ಚಿಪ್ಕೋಚಳುವಳಿಯ ಸದಸ್ಯರು ಬೆಟ್ಟಗಾಡು ಪ್ರದೇಶಗಳಲ್ಲಿ ಕಾಲ್ನಡಿಗೆಯಲ್ಲಿ ನಡೆದು ಸಾಧಿಸಿದ್ದಾರೆ. ಇವರು ಹಳ್ಳಿಯ ಜನರಿಗಾಗಿ ಎರಡು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಮೊದಲನೆಯ ಬೆಟ್ಟಗಾಡು ಪ್ರದೇಶಗಳಲ್ಲಿ ವಾಣಿಜ್ಯ ಉದ್ದೇಶಗಳಿಗಾಗಿ ಮರಕಡಿಯುವುದನ್ನು ತಡೆಯುವುದು. ಎರಡನೆಯದು ಆಹಾರ ಮೇವು ಸೌದೆ,ಗೊಬ್ಬರ ಮತ್ತು ನಾರು ಈ ಐದು ಅವಶ್ಯಕತೆಗಳನ್ನು ಪೂರೈಸುವಂತಹ ಮರಗಳನ್ನು ನೆಡುವುದು ಈ ಎರಡು ಕಾರ್ಯಗಳು ಇಂದು ಹಿಮಾಲಯ ಪರ್ವತ ಪ್ರದೇಶದ ನೂರಾರು ಹಳ್ಳಿಗಳಲ್ಲಿ ಅತ್ಯಂತ ಜನಪ್ರಿಯವಾಗಿದೆ.ಈ ಚಳುವಳಿಯು ಅಸಾಧಾರಣ ಗುಟ್ಟೆಂದರೆ ಅದು ಜನರಿಂದ ಜನರ ಒಳತಿಗಾಗಿ ಹುಟ್ಟಿ ಬೆಳೆದ ಆಂದೋಲನ. ಈ ಚಳುವಳಿಯು ೧೯೭೦ ರಲ್ಲಿ ಉತ್ತರಾಖಂಡದ ಗರ್ವಾಲ ಹಿಮಾಲಯದ ಹಾಗೂ ಉತ್ತರಪ್ರದೇಶದಲ್ಲಿ ಅತಿಯಾಗಿ ನಡೆಯುತ್ತಿದ್ದ ಮರಗಳ ನಾಶವನ್ನು ನೋಡಿ, ಮಹಾತ್ಮ ಗಾಂಧಿಯವರ ಮೂಲಮಂತ್ರ ಸತ್ಯಾಗ್ರಹ ಮತ್ತು ಅಹಿಂಸೆ ಮಾರ್ಗದಂತೆ ಮರಗಳನ್ನು ಕಡಿಯುವದರ ಈ ಬಗ್ಗೆಅಸಹಕಾರ ತೋರಿಸಿದ ಪ್ರಮುಖ ಚಳುವಳಿಯಾಗಿದೆ. ಮುಂದೆ ಗಿಡನೆಡುವ,ಮರಬೆಳೆಸುವ ಕಾರ್ಯಗಳು ಹೆಚ್ಚಾಗಿ ನಡೆದವು.ಅಂದಿನಿಂದ ಬಹಳ ಆಂದೋಲನಗಳು ಹೆಚ್ಚಾಗಿ ಪರಿಸರ ಸಂರಕ್ಷಣೆಗೆ ಹೆಚ್ಚೆಚ್ಚು ಸಂಘಟನೆಗಳು ನಡೆಯುತ್ತಿವೆ.

**ಪ್ರಶ್ನೆಗಳು:**

೧. ಚಿಪ್ಕೋಚಳುವಳಿಯ ಸದಸ್ಯರು ಇಂತಹ ಪ್ರದೇಶಗಳಲ್ಲಿ ಕಾಲ್ನಡಿಗೆಯಲ್ಲಿ ನಡೆದು ಸಾಧಿಸಿದ್ದಾರೆ.

ಅ) ಮರಳುಗಾಡು ಆ) ಮಲೆನಾಡಿನಲ್ಲಿ ಇ) ಬೆಟ್ಟಗಾಡು ಈ) ಅರಣ್ಯ

೨. ಚಿಪ್ಕೋಚಳುವಳಿಯ ಗುರಿಯೆಂದರೆ ಇದರ ವಿನಾಶವಿಲ್ಲದೆ ಅಭಿವೃದ್ಧಿಯನ್ನು ಸಾಧಿಸುವುದು.

ಅ) ನಾಡಿನ ಆ) ಗ್ರಾಮದ ಇ) ಪ್ರಾಣಿಗಳ ಈ) ಪರಿಸರ

೩. ವೃತ್ತಪತ್ರಿಕೆಗಳು, ಸಿನಿಮಾ, ರೇಡಿಯೋ, ದೂರದರ್ಶನ ಇವೆಲ್ಲವೂ ಈ ಮಾಧ್ಯಮವೆಂದೇ ಪ್ರಸಿದ್ಧವಾಗಿದೆ.

ಅ) ಸಮೂಹ ಆ) ಅಂಚೆಮಾಧ್ಯಮ ಇ) ಮುದ್ರಣ ಈ) ಸಾಮಾಜಿಕ

೪. ಸತ್ಯಾಗ್ರಹ ಮತ್ತು ಅಹಿಂಸೆ ಮೂಲಕ ಸ್ವಾತಂತ್ರ್ಯ ಎಂಬುದು ಇವರ ಮೂಲಮಂತ್ರ.

ಅ) ಮಹಾತ್ಮಗಾಂಧಿ ಆ) ಭಗತ್ ಸಿಂಗ್ ಇ) ಮಂಗಲ್ ಪಾಂಡೆ ಈ) ಸುಖದೇವ್

೫. ಚಿಪ್ಕೋಚಳುವಳಿಯ ಮೊದಲನೆಯ ಕಾರ್ಯಕ್ರಮ ಬೆಟ್ಟಗಾಡು ಪ್ರದೇಶಗಳಲ್ಲಿ ವಾಣಿಜ್ಯ ಉದ್ದೇಶಗಳಿಗಾಗಿ ಇವನ್ನು ತಡೆಯುವುದು.

ಅ)ಮೂಢನಂಬಿಕೆ ಆ) ಮರಕಡಿಯುವುದನ್ನು
ಇ)ಮನೆಗಳನಿರ್ಮಾಣ ಈ) ನಗರೀಕರಣ

## ಅನ್ವಯಿಕ ವ್ಯಾಕರಣ

**II.ಕೆಳಗಿನ ಪ್ರಶ್ನೆಗಳಿಗೆ ೪ ಉತ್ತರಗಳನ್ನು ಕೊಡಲಾಗಿದೆ.ಅವುಗಳಲ್ಲಿ ಸರಿಯಾದ ೧೬ ಬಹು ಆಯ್ಕೆ ಪ್ರಶ್ನೆಗಳಿಗೆ ಮಾತ್ರ ಉತ್ತರಿಸಿ . 1x16=16**

೧. 'ಕಿಂಕರ' ಈ ಪದದ ಸಮಾನಾರ್ಥಕ ಪದವಿದು.

ಅ) ಸೈನಿಕ ಆ) ಗೂಢಚಾರ ಇ) ನಾಯಕ ಈ) ಸೇವಕ

೨. 'ಜಯ' ಈ ಪದದ ವಿರುದ್ಧ ಪದವಿದು.

ಅ) ಶರಣಾಗು ಆ) ಅಜಯ ಇ) ಅಪಜಯ ಈ) ಸದೆಬಡಿ

೩. 'ಮೈಯೆಲ್ಲಾ ಕಣ್ಣಾಗಿರು' - ಈ ನುಡಿಗಟ್ಟಿನ ಅರ್ಥವಿದು

ಅ) ಎಚ್ಚರಿಕೆಯಿಂದಿರು ಆ) ಹಿಂಬಾಲಿಸು ಇ) ಕಂಗೆಡು ಈ) ಮರೆಮಾಚು

೪. ಮಕ್ಕಳು ತರಗತಿಗೆ ಬಂದರು- ಈ ವಾಕ್ಯದಲ್ಲಿರುವ ಕಾಲ.

ಅ) ಭವಿಷ್ಯತ್ ಕಾಲ ಆ) ಭೂತಕಾಲ ಇ) ವರ್ತಮಾನ ಕಾಲ ಈ) ಗುಳಿಕಕಾಲ

೫. ಒಳ್ಳೆಯ ಆರೋಗ್ಯಕ್ಕೆ ಹಣ್ಣು, ತರಕಾರಿ, ಹಾಲು, ವ್ಯಾಯಾಮ ಇವೆಲ್ಲವೂ ಬಹಳ ಮುಖ್ಯ- ಈ ವಾಕ್ಯದಲ್ಲಿ ಬಳಸಲಾದ ಲೇಖನ ಚಿಹ್ನೆ.

ಅ) ಅರ್ಧವಿರಾಮ ಆ)ಅಲ್ಪವಿರಾಮ ಇ)ಪ್ರಶ್ನಾರ್ಥಕ ಈ) ಆಶ್ಚರ್ಯಸೂಚಕ

೬. ರಾಜೇಶನು ಸಂತೆಯಿಂದ ಹೂವನ್ನು ತಂದನು-ಈ ವಾಕ್ಯದಲ್ಲಿರುವ ಕರ್ತೃ ಪದವಿದು.

ಅ) ತಂದನು ಆ)ಸಂತೆಯಿಂದ ಇ)ಹೂವನ್ನು ಈ)ರಾಜೇಶನು

೭. ಪ್ರಾಣಿಗಳು <u>ಕಾಡಿನಲ್ಲಿ</u> ವಾಸಿಸುತ್ತವೆ.- ಗೆರೆ ಎಳೆದ ಪದದ ವಿಭಕ್ತಿ.

ಅ) ಪ್ರಥಮಾ ಆ) ದ್ವಿತೀಯಾ ಇ) ಸಪ್ತಮೀ ಈ) ತೃತೀಯ

೮. ಕೆಂಪೇಗೌಡನು ಸೈನಿಕರನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನು-ಈ ವಾಕ್ಯದಲ್ಲಿನ ಅಂಕಿತನಾಮ

ಅ)ಸೈನಿಕ ಆ) ನೋಡಿಕೊಳ್ಳು ಇ)ಪ್ರೀತಿಯಿಂದ ಈ)ಕೆಂಪೇಗೌಡ

೯. ಬೆಳೆಯುವ ಪೈರು ............ಈ ಗಾದೆ ಮಾತಿನ ಮುಂದಿನ ರೂಪ

ಅ) ಮಣ್ಣಿನಲ್ಲಿ ಆ) ಗಿಡದಲ್ಲಿ ಇ) ಮೊಳಕೆಯಲ್ಲಿ ಈ) ಗದ್ದೆಯಲ್ಲಿ

೧೦. ಹಾವು ಸರಸರನೆ ಹರಿದು ಪೊದೆಯಲ್ಲಿ ಅಡಗಿತು -ಈ ವಾಕ್ಯದಲ್ಲಿರುವ ಅನುಕರಣಾವ್ಯಯವಿದು:

ಅ) ಹಾವು ಆ) ಸರಸರನೆ ಇ) ಪೊದೆಯಲ್ಲಿ ಈ) ಅಡಗಿತು

೧೧.'ಜಾರತ್ತೈತಿ' ಪದವನ್ನು ಗ್ರಂಥಸ್ಥ ರೂಪದಲ್ಲಿ ಬರೆದಾಗ....

ಅ) ಜಾರಿತು ಆ) ಜಾರುತ್ತದೆ ಇ) ಜಾರುವುದು ಈ) ಜಾರಿಹೋಯಿತು

೧೨. 'ಕೋಡುಗಲ್ಲು' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

ಅ) ಯಕಾರಾಗಮ ಸಂಧಿ ಆ) ವಕಾರಾಗಮಸಂಧಿ ಇ) ಲೋಪಸಂಧಿ ಈ) ಆದೇಶಸಂಧಿ

೧೩. ಮನೆ-ಮಠ ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.

ಅ) ಒಗಟು ಆ) ಗಾದೆಮಾತು ಇ) ಪ್ರಾಸಪದ ಈ)ಜೋಡಿಪದ

೧೪.'ಸೋದರ' ಈ ಪದದ ಸ್ತ್ರೀಲಿಂಗ ರೂಪವಿದು.

ಅ) ಗಾಯಕ ಆ) ಹುಡುಗಿ ಇ) ಲೇಖಕಿ ಈ) ಸೋದರಿ

೧೫.'ಅವಳು ಹಾಡನ್ನು ಮಧುರವಾಗಿ ಹಾಡಿದಳು' ಈ ಪದದಲ್ಲಿರುವ ಸರ್ವನಾಮ

ಅ) ಅವಳು ಆ) ಹಾಡನ್ನು ಇ) ಮಧುರವಾಗಿ ಈ) ಹಾಡಿದಳು

೧೬. 'ಚಿನ್ನ- ಬಂಗಾರ, ಹೊನ್ನು'- ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.

ಅ) ವಿರುದ್ಧಪದ ಆ) ಸಮಾನಾರ್ಥಕ ಪದ ಇ) ಪ್ರಾಸಪದ ಈ) ಜೋಡಿಪದ

೧೭.ಹುಡುಗರು ಮೈದಾನದಲ್ಲಿ ಆಡಿ ಆಡಿ ಸಾಕಾದರು-ಈ ವಾಕ್ಯದಲ್ಲಿರುವ ದ್ವಿರುಕ್ತಿ ಪದವಿದು.

ಅ) ಆಡಿ ಆಡಿ ಆ) ಮೈದಾನದಲ್ಲಿ ಈ) ಹುಡುಗರು ಈ) ಸಾಕಾದರು

೧೮. ಮರದ ಕೆಳಗೆ ಬೆಕ್ಕು ಕುಳಿತಿದೆ.- ಈ ವಾಕ್ಯವನ್ನು ಬಹುವಚನಕ್ಕೆ ಬದಲಿಸಿದಾಗ ಬರುವ ರೂಪವಿದು.

ಅ) ಮರದ ಕೆಳಗೆ ಬೆಕ್ಕುಗಳು ಕುಳಿತಿದೆ.

ಆ) ಮರಗಳ ಕೆಳಗೆ ಬೆಕ್ಕು ಕುಳಿತಿವೆ.

ಇ) ಮರಗಳ ಕೆಳಗೆ ಬೆಕ್ಕುಗಳು ಕುಳಿತಿವೆ.

ಈ) ಮರದ ಕೆಳಗಡೆ ಬೆಕ್ಕುಗಳು ಕುಳಿತಿತ್ತು.

೧೯. 'ಸಾಮರ್ಥ್ಯವಿರುತ್ತದೆ ಹುಟ್ಟಿನಿಂದ ಮಾನಸಿಕ ಎಲ್ಲರಿಗೂ' -ಹಿಂದು ಮುಂದಾಗಿರುವ ಪದಗಳನ್ನು ಜೋಡಿಸಿ ಅರ್ಥ ಪೂರ್ಣವಾಕ್ಯ ಮಾಡಿದಾಗ ಬರುವ ರೂಪವಿದು.

ಅ) ಹುಟ್ಟಿನಿಂದ ಎಲ್ಲರಿಗೂ ಮಾನಸಿಕ ಸಾಮರ್ಥ್ಯವಿರುತ್ತದೆ.

ಆ) ಮಾನಸಿಕ ಸಾಮರ್ಥ್ಯವಿರುತ್ತದೆ ಎಲ್ಲರಿಗೂ ಹುಟ್ಟಿನಿಂದ.

ಇ) ಎಲ್ಲರಿಗೂ ಮಾನಸಿಕ ಸಾಮರ್ಥ್ಯವಿರುತ್ತದೆ ಹುಟ್ಟಿನಿಂದ.

ಈ) ಸಾಮರ್ಥ್ಯವಿರುತ್ತದೆ ಮಾನಸಿಕ ಹುಟ್ಟಿನಿಂದ ಎಲ್ಲರಿಗೂ

**III.(ಅ)ಕೆಳಗಿನ 'ಕಟ್ಟಬೊಮ್ಮು' ಪಾಠವನ್ನು ಓದಿಕೊಂಡು ಬಹು ಆಯ್ಕೆ ಪ್ರಶ್ನೆಗಳಿಗೆ ಉತ್ತರಿಸಿ. 1x5=5**

ಕಟ್ಟಬೊಮ್ಮು ಆಂಧ್ರುದವನಂತೆ ಅವನ ಹೆಸರು " ಗಟ್ಟಿಬೊಮ್ಮು" ಅಂತೆ ಅಂದರೆ ಬಲಶಾಲಿಯಾದವನು ಎಂದರ್ಥ.ಬಲಶಾಲಿಯಾಗಿ ಬೆಳೆದುನಿಂತ ಗಟ್ಟಿಬೊಮ್ಮುವನ್ನು ಪಾಂಡ್ಯರಾಜ ಜಗವೀರ, ದಳಪತಿಯನ್ನಾಗಿ ಮಾಡಿದ ಮತ್ತು ಜಗವೀರನಿಗೆ ಸಾವು ಸಮೀಪಿಸಿದಾಗ ಬೊಮ್ಮುವನ್ನು ಬಳಿ ಕರೆದು "ಬೊಮ್ಮು! ನಾನು ಇನ್ನು ಹೆಚ್ಚು ಕಾಲ ಬದುಕಲಾರೆ. ಇನ್ನು ಈ ರಾಜ್ಯಕ್ಕೆ ನೀನೇ ದಿಕ್ಕು. ರಾಜ್ಯವನ್ನು ಚೆನ್ನಾಗಿ ನೋಡಿಕೋ.

ಪ್ರಜೆಗಳನ್ನು ಸ್ವಂತ ಮಕ್ಕಳಂತೆ ಕಾಣು'' ಎಂದು ರಾಜ್ಯವನ್ನು ಒಪ್ಪಿಸಿದ. ಅವನು ಸತ್ತುಹೋದ.

ಬೊಮ್ಮು ಪಾಂಚಾಲಕುರುಚ್ಚಿ ಎಂಬ ಊರನ್ನು ರಾಜಧಾನಿಯನ್ನಾಗಿ ಮಾಡಿಕೊಂಡ.ಅಲ್ಲೊಂದು ಬಲವಾದ ಕೋಟೆ ಕಟ್ಟಿಸಿದ.ಬಹು ಜನಪ್ರಿಯನಾದ. ೧೭೯೧ರಲ್ಲಿ ಜನರು ಅವನಿಗೆ ಪಟ್ಟಕಟ್ಟಿದರು.

ಇತ್ತ ದೇಶದಾದ್ಯಂತ ಆಂಗ್ಲರ ಈಸ್ಟ್ ಇಂಡಿಯಾ ಕಂಪೆನಿಯು ತನ್ನ ಬಲೆಯನ್ನು ಹರಡುತ್ತಿತ್ತು. ಮೆಲ್ಲಮೆಲ್ಲನೆ ಅನೇಕ ರಾಜ್ಯಗಳನ್ನು ತಮ್ಮ ಹೊಟ್ಟೆಯೊಳಗೆ ಹಾಕಿಕೊಂಡ ಆಂಗ್ಲರು ಅಲ್ಲಿನ ರಾಜರನ್ನು ಸದೆಬಡಿದರು.

ಬೊಮ್ಮುವಿನ ಬಳಿಗೆ ಬಂದ ಆಂಗ್ಲ ಪ್ರತಿನಿಧಿ ಕಪ್ಪಕಾಣಿಕೆ ಕೊಡಲು ಕೇಳಿದ.ಬೊಮ್ಮು ಅವನನ್ನು ಧಿಕ್ಕರಿಸಿ ಹಿಂದಕ್ಕಟ್ಟಿದ.

ಇವನ ಗಂಡುಗಲಿತನವನ್ನು ಕಂಡು ಆಂಗ್ಲರಿಗೆ ನೆತ್ತಿಯ ಮೇಲೆ ಮೆಣಸು ಅರೆದಂತಾಯಿತು.ದಿಕ್ಕು ತೋರದಾಯಿತು. ಕೊನೆಗೆ ತಮ್ಮ ಸ್ವಭಾವಕ್ಕೆ ತಕ್ಕಂತೆ ಮೋಸದಿಂದ ಇವನನ್ನು ಬಂಧಿಸಲು ನಿರ್ಧರಿಸಿದರು.

ಈ ಕೆಲಸಕ್ಕೆ ಆಂಗ್ಲರು ಜಾಕ್ಸನ್ ಎಂಬುವವನನ್ನು ನೇಮಿಸಿದರು. ಬೊಮ್ಮುವಿಗೆ ಜಾಕ್ಸನ್ ಒಂದು ಪತ್ರ ಬರೆದು ಬಹಳ ಗಹನವಾದ ವಿಷಯವನ್ನು ಚರ್ಚಿಸಲು ಬರಬೇಕೆಂದು ತನ್ನನ್ನು ಕಾಣಬೇಕೆಂದು ತಿಳಿಸಿದ. ಒಬ್ಬನೇ ಬರಬೇಕೆಂದೂ ತಿಳಿಸಿದ್ದ.

**ಪ್ರಶ್ನೆಗಳು :**

೧. ಬೊಮ್ಮು ಈ ಊರನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು.

ಅ) ಪಾಂಚಾಲಕುರುಚ್ಚಿ ಆ) ಪುಂಗನೂರು ಇ) ಮೈಸೂರು ಈ)ಮದ್ದೂರು

೨. 'ಕಟ್ಟಬೊಮ್ಮು' - ಈ ಹೆಸರಿನ ಅರ್ಥ....

ಅ) ಬಲಹೀನ ಆ) ಬುದ್ಧಿಹೀನ ಇ) ಬಲಶಾಲಿ ಈ) ಸೇನಾಧಿಪತಿ

೩. ಭಾರತದಾದ್ಯಂತ ಆಂಗ್ಲರ ಈ ಕಂಪನಿಯು ತನ್ನ ಬಲೆಯನ್ನು ಹರಡಿತ್ತು.

ಅ) ಈಸ್ಟ್ ಇಂಡಿಯಾ ಆ) ಸೌತ್ ಇಂಡಿಯಾ

ಇ) ವೆಸ್ಟ್ ಇಂಡಿಯಾ ಈ) ಮದರ್ಇಂಡಿಯಾ

೪. ಬಲಶಾಲಿಯಾಗಿ ಬೆಳೆದುನಿಂತ ಕಟ್ಟಬೊಮ್ಮುವನ್ನು ದಳಪತಿಯಾಗಿ ಮತ್ತು ರಾಜನಾಗಿ ಮಾಡಿದವರು.

ಅ) ಜಗವೀರ ಆ) ಮುತ್ತುವೈರವ ಇ) ರಾಜ ಚೋಳ ಈ) ತೊಂಡಮಾನವ

೫. ಆಂಗ್ಲರು ಅವರ ಈ ಅಧಿಕಾರಿಯನ್ನು ಬೊಮ್ಮುವಿನಿಂದ ಕಪ್ಪಕಾಣಿಕೆಯನ್ನು ಪಡೆದುಕೊಳ್ಳಲು ನೇಮಕ ಮಾಡಿದರು.

ಅ) ಲೂಷಿಂಗ್ ಟನ್ ಆ) ಕ್ಲಾರ್ಕ್ ಇ) ಬ್ಯಾನರ್ ಈ) ಜಾಕ್ಸನ್

**(ಆ) ಕೆಳಗಿನ 'ನಮ್ಮೂರ ಕೆರೆ' ಪದ್ಯಭಾಗವನ್ನು ಒದಿಕೊಂಡು ಕೊಟ್ಟಿರುವ ಬಹು ಆಯ್ಕೆ ಪ್ರಶ್ನೆಗಳಿಗೆ ಉತ್ತರಿಸಿ.** **1x5=5**

ಸುತ್ತ ಹತ್ತೂರಲ್ಲಿ ಮುತ್ತಂತೆ ನಮ್ಮ ಕೆರೆ
ಅದರ ಉಳಿವಿನ ಕಥೆಯ ಕೇಳಿರಿಲ್ಲ
ಕೆರೆಯ ದಾರಿಯಲೆಲ್ಲ ತಂಪು ತಂಬೆಲರು
ಏರಿಯ ಸುತ್ತೆಲ್ಲ ಕಾವಲಿನ ಮರಸಾಲು
ಒಂದೊಂದು ಮರದಲ್ಲಿ ಹತ್ತಾರು ಟೊಂಗೆಗಳು
ಹತ್ತಾರು ಟೊಂಗೆಯಲ್ಲಿ ನೂರಾರು ಹಕ್ಕಿಗಳು
ಬೆಳ್ಳಿಯ ತಟ್ಟೆಯ ಹಾಗೆ ಹೊಳೆ ಹೊಳೆವ ನೀರು
ಮಿಂಚುಬಳ್ಳಿಯ ಹಾಗೆ ಥಳ ಥಳಿಪ ಮೀನು
ಕಪ್ಪೆಗಳ ವಟವಟರು,ಸುತ್ತ ಮೇಯುವ ಟಗರು
ದನಗಾಹಿಯ ಹಾಡಿಗೆ ತಲೆದೂಗುವಾ ಪೈರು
ಕಾರ್ಖಾನೆಗಳು ಬಂದು,ಜನಸಂಖ್ಯೆ ಬೆಳೆದು
ಗಟಾರದ ಕೊಳೆಯಲ್ಲ ಕೆರೆಯೊಳಗೆ ಬೆರೆತು
ಭೂತಾಯ ಎದೆ ತುಂಬ ಕೊಳವೆಬಾಯಿಯ ಕೊರೆದು
ನೀರಸೆಲೆಯೂ ಬತ್ತಿಹುದು ಕೆರೆ ಒಡಲು ಬಿರಿದು

**ಪ್ರಶ್ನೆಗಳು :**

೧.ಕೆರೆಯ ನೀರು ಹೀಗೆ ಹೊಳೆಯುತಿತ್ತು........

ಅ) ಚಿನ್ನದ ತಟ್ಟೆ ಆ) ಬೆಳ್ಳಿಯ ತಟ್ಟೆ ಇ) ಲೋಹದ ತಟ್ಟೆ ಈ) ಕಂಚಿನ ತಟ್ಟೆ

೨.ಕೆರೆಯ ಏರಿಯ ಸುತ್ತ ಇದರ ಕಾವಲಿತ್ತು......

ಅ) ಮರಗಳ ಆ) ಪ್ರಾಣಿಗಳ ಇ) ಮನುಷ್ಯರ ಈ) ಹಕ್ಕಿಗಳ

೩.ಕೆರೆಯ ಸುತ್ತ ಇರುವ ಪೈರು ಇವರ ಹಾಡಿಗೆ ತಲೆದೂಗಿವೆ.

ಅ) ಕೊಳಲಜೋಗಿ ಆ) ಅಲೆಮಾರಿಗಳ ಇ) ದನಗಾಹಿಗಳ ಈ) ಊರಿನ ಜನರ

೪. ನೀರಿನ ಸೆಲೆ ಬತ್ತಿ ಕೆರೆ ಒಡಲು ಬತ್ತಿರುವುದು ಇದನ್ನು ಕೊರೆದಿರುವುದರಿಂದ...

ಅ) ಕೊಳವೆ ಬಾವಿ ಆ) ನೆಲಬಾವಿ ಇ) ಬೆಟ್ಟದ ಬಾವಿ ಳ) ಕಟ್ಟಿದ ಬಾವಿ

೫. ಕೆರೆಯನ್ನು ಈ ಪದ್ಯದಲ್ಲಿ ಹೋಲಿಸಿರುವುದು.......

ಅ) ವಜ್ರ ಆ) ಮುತ್ತು ಇ) ಹವಳ ಈ) ಪಚ್ಚೆ

**IV.ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ.ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **1x4=4**

೧. ಭಗತ್‌ಸಿಂಗ್ ಸ್ವಾತಂತ್ರ್ಯಕ್ಕೆ ಅಡ್ಡಿಯಾದ ಈ ಅಧಿಕಾರಿಯನ್ನು ಕೊಂದನು.

ಅ) ಪೋರ್ಚುಗೀಸ್ ಆ)ಫ್ರೆಂಚ್ ಇ) ಗ್ರೀಕ್ ಈ) ಆಂಗ್ಲ

೨. ಜೀವನದಲ್ಲಿ ಸಣ್ಣ ಪುಟ್ಟ ಕಾರಣಗಳಿಗಾಗಿ ಖಿನ್ನರಾಗದೆ,ನಿರಾಶರಾಗದೆ ಹೀಗೆ ಮುಂದುವರೆಯಬೇಕು.

ಅ) ನಿರಾಸೆಯಿಂದ ಆ) ಅಸಂತೋಷದಿಂದ
ಇ) ಹೊಸಹುರುಪಿನಿಂದ ಈ) ಅಧೈರ್ಯದಿಂದ

೩. ಚಿಣ್ಣರು ಕಟ್ಟಿದ ಬಿದಿರಿನ ಪುಟ್ಟಿ ಇದನ್ನು ಹೋಲುತ್ತದೆ.

ಅ) ಪುಷ್ಪಕ ವಿಮಾನ ಆ) ಐರಾವತ ಇ) ಆರ್ಯಭಟ ಈ) ದೊಡ್ಡಮರದಂತೆ

೪. ಆಕಾಶದ ಬುಟ್ಟಿಯು ತಾರೆಯ ಜೊತೆ ಕೂಡಿ ಗೆಳೆತನ ಮಾಡಲು ಈ ಗೂಡಿಗೆ ಹಾರುತಿದೆ.

ಅ) ಸೂರ್ಯನ ಆ) ಗಗನ ಇ) ಚಂದ್ರನ ಈ) ಉಲ್ಕೆಯ

## ವಿಭಾಗ – ಬಿ

**V. ಸುಳಿವು ಪದಗಳ ಸಹಾಯದಿಂದ ಗದ್ಯಭಾಗವನ್ನು ಪೂರ್ತಿ ಮಾಡಿರಿ. 1/2 x8=4**

**(ಸುಳಿವು ಪದಗಳು:- ನಿರ್ಭಯ, ಸುಂದರ, ನೂರೆಂಟು, ಹುಲಿಸಿಂಹ, ಶಿವಮೊಗ್ಗ, ದಟ್ಟವಾದ, ಕಾಫಿತೋಟಗಳು, ಕಾಡುಗಳಲ್ಲಿ)**

ಮಲೆನಾಡು ಎಂದರೆ ಬೆಟ್ಟಗಳು ಮತ್ತು --------- ಮರಗಳಿರುವ ಪ್ರದೇಶ. ಇಲ್ಲಿನ.......... ಹುಲಿ, ಚಿರತೆ, ಜಿಂಕೆ ಎಲ್ಲವೂ ಹೆಚ್ಚಾಗಿ ಕಾಣುತ್ತ. ಇವುಗಳ ನಡುವೆ-------ತುಂಬಿರುವ

ಪರಿಸರದಿಂದ ಇಲ್ಲಿನ ಜನರಿಗೆ ಈ ಪ್ರಾಣಿಗಳ ಹೆಸರುಗಳೇ ಮರೆತು ಹೋಗುತ್ತಿವೆ. ಇದಕ್ಕೆ ಉತ್ತರವಾಗಿ 'ಮಲೆನಾಡಿನ ಬಾಗಿಲು' ಎಂದು ಹೆಸರಾಗಿರುವ ----------ದಲ್ಲಿ ಹುಲಿ,ಸಿಂಹ, ಚಿರತೆ, ನವಿಲು ಹೀಗೆ--------ವಿವಿಧ ಪ್ರಾಣಿಗಳು ತಾವರೆಕೊಪ್ಪದಲ್ಲಿವೆ. ಹಾಗೆಯೇ ಇಲ್ಲಿಯೇ -----------ಧಾಮವಿದೆ. ಪ್ರಾಣಿಗಳೆಲ್ಲವು ----------ವಾಗಿ ಓಡಾಡುವುದನ್ನು ಕಾಣುತ್ತೇವೆ. ಮುಂದೆ ಇದೊಂದು ------------ ಪ್ರವಾಸಧಾಮವಾಗುವುದರಲ್ಲಿ ಸಂಶಯವಿಲ್ಲ.

**VI. ಪತ್ರಲೇಖನ : ನಿಮ್ಮ ಹುಟ್ಟುಹಬ್ಬಕ್ಕೆ ಗೆಳೆಯ/ಗೆಳತಿಯನ್ನು ಆಹ್ವಾನಿಸಿ, ಅವರಿಗೊಂದು ಪತ್ರ ಬರೆಯಿರಿ.** **4**

**VII.ಕೆಳಗೆ ಕೊಟ್ಟಿರುವ ಯಾವುದಾದರು ಒಂದನ್ನು ಕುರಿತು ೮-೧೦ ವಾಕ್ಯಗಳಲ್ಲಿ ಪ್ರಬಂಧವನ್ನು ಬರೆಯಿರಿ.** **4**

೧. ನಿಮ್ಮ ನೆಚ್ಚಿನ ಹವ್ಯಾಸ

೨. ಜಲಸಂರಕ್ಷಣೆಯಲ್ಲಿ ನಿಮ್ಮ ಪಾತ್ರ

೩. ನೀವು ಆಚರಿಸಿದ ಯಾವುದಾದರೊಂದು ಹಬ್ಬ

## ಪದ್ಯಗಳ ಅಧ್ಯಯನ

**VIII. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **1x4=4**

೧. ಕನ್ನಡಮ್ಮ ಈ ನಾಡ ಮಣ್ಣಿನಲ್ಲಿ ಏನನ್ನು ಇರಿಸಿದ್ದಾಳೆ?

೨. ಬಾಲಕ ಜೂಲಿಯೋ ಇಗ್ನೇಶಿಯಸ್ ತಾನು ಮುಂದೆ ಏನಾಗಬೇಕೆಂದು ಬಯಸಿದ್ದನು?

೩. ಜಂಗಮ ವೇಷಧಾರಿ ಯಾರು?

೪. ನಮ್ಮೂರ ಕೆರೆ ಯಾವುದರ ಆಗರವಾಗಿದೆ ಎಂದು ಕವಿ ಹೇಳುತ್ತಾರೆ?

**IX.ಕೆಳಗಿನ ಪ್ರಶ್ನೆಗಳಿಗೆ ೨-೩ ವಾಕ್ಯಗಳಲ್ಲಿ ಉತ್ತರಿಸಿ.** **2x4=8**

೧. ಕನ್ನಡಮ್ಮನ ಲಾಲಿ ಹಾಡು ಯಾವ ರೀತಿಯಲ್ಲಿದೆ?

೨. ಮಾಲತಿಹೊಳ್ಳ ಜೀವನದಲ್ಲಿ ಕಂಡುಕೊಂಡ ಸಿದ್ಧಾಂತವೇನು?

೩.ಐಕ್ಯಗಾನ ಪದ್ಯದಲ್ಲಿ ಮರದ ಕೊಂಬೆ ಹಾಗೂ ಬುಡ ಏನನ್ನು ಸಂಕೇತಿಸುತ್ತವೆ?

೪. ಆಂಜನೇಯನು ಸೂರ್ಯದೇವನಿಂದ ಯಾವ ವಿದ್ಯೆ ಕಲಿತನು? ಅವನು ನೋಡು ನೋಡುವಷ್ಟರಲ್ಲಿ ಯಾವ ರೀತಿ ಬೆಳೆದನು?

**X. ಕೆಳಗಿನ ಪ್ರಶ್ನೆಗಳಿಗೆ ೩-೪ ವಾಕ್ಯಗಳಲ್ಲಿ ಉತ್ತರಿಸಿ.** **3x2=6**

೧. ಬಾಳಂಭಟ್ಟನು ಕುಸ್ತಿಪಟ್ಟುಗಳನ್ನು ಹೇಗೆ ಕಲಿತನು?

೨. ಹುಣಸೆಮರದ ಕೆಳಗೆ ಕಟ್ಟಬೊಮ್ಮ ಭೂಮಿತಾಯಿಗೆ ಏನೆಂದು ಹೇಳಿದನು?

**XI. ಯಾರು ಯಾರಿಗೆ ಯಾವಾಗ ಹೇಳಿದರು?** **3x2=6**

೧. "ಶರಣು ಬಂದವರಿಗೆ ಆಶ್ರಯ ನೀಡುವುದು ನಮ್ಮ ಧರ್ಮ!"

೨. "ನಿನ್ನಲ್ಲಿ ಪರಮಶಕ್ತಿಯಿದೆ"

**XII.ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಒಂದು ಪ್ರಶ್ನೆಗೆ ೫-೬ ವಾಕ್ಯಗಳಲ್ಲಿ ಉತ್ತರಿಸಿ.** **4**

೧. ಸಮುದ್ರ ಅಲೆಗಳ ರುದ್ರ ನರ್ತನವನ್ನು ವರ್ಣಿಸಿರಿ.

೨. ಸುಂಟರಗಾಳಿಯಿಂದ ಉಂಟಾದ ಪರಿಣಾಮಗಳೇನು?

***************